ಸುರಿದದ್ದೇ ಬಂತು. ವಿಳಾಸ ಪತ್ತೆಯಾಗಲಿಲ್ಲ.

ಅದು ಮೊಬೈಲ್ ರೇಂಜ್ ಸಿಗದ ಊರು. ಅವರ ಮನೆಯ ಲ್ಯಾಂಡ್‌ಲೈನ್ ನಂಬರ್ ಕೂಡ ಇಲ್ಲ. ಹೇಗೋ ಕಾರಿನವನ ಸಹಾಯದಿಂದ ಮನೆಯಿರುವ ಸ್ಥಳವನ್ನು ಹುಡುಕಿದೆ. ಬೆಳ್ಳನೆಯ ಅರೆನೆರೆತ ಕೂದಲಿನ ಹೆಂಗಸೊಬ್ಬಳು ನನ್ನನ್ನು ತದೇಕಚಿತ್ತದಿಂದ ನೋಡುತ್ತಿರುವುದನ್ನು ಗಮನಿಸಿದೆ. ಈ ಹೆಂಗಸನ್ನಾದರು ಕೇಳಿದರೆ ತಿಳಿದೀತು ಎನ್ನುವ ಭರವಸೆಯಿಂದ ಹೋದೆ.

'ಹೌದು, ತೋಶಿಬಾಯಿ ಕಾಂಪೌಂಡು ಇದೆ' ಎಂದರು ಆಕೆ. ಹಂಸಿನಿಯ ಗಂಡನ ಹೆಸರು ಹೇಳಿದೆ. ಆ ಹೆಂಗಸು ಮುಖಕ್ಕೆ ಬಾಗಿಲನ್ನು ತಳ್ಳುವಂತೆ ಸಟಕ್ಕನೆ ಒಳಗೆ ಹೋಗಿ ದಢಾರನೆ ಬಾಗಿಲು ಮುಚ್ಚಿಕೊಂಡರು. ಕೈಗೆ ಸಿಕ್ಕ ತುತ್ತು ಬಾಯಿಗೆ ಇಲ್ಲವಾದಂತೆ ಮುಚ್ಚಿದ ಬಾಗಿಲನ್ನೇ ನೋಡುತ್ತಾ ನಿಂತೆ. ಅಲ್ಲೇ ಅಕ್ಕ ಪಕ್ಕದಲ್ಲಿ ಯಾರಾದರೂ ಸಹಾಯಕ್ಕೆ ಸಿಕ್ಕಾರೆನ್ನುವ ಭರವಸೆಯಿಂದ ನೋಡಿದೆ. ಯಾರೂ ಕಾಣಿಸಲಿಲ್ಲ. ಕಾಂಪೌಂಡ್‌ನಿಂದ ಹೊರಗೆ ಬಂದು ರಸ್ತೆಯಲ್ಲಿ ನಿಂತೆ. ದೂರದಲ್ಲಿ ಸ್ಕೂಟರ್ ಬರುತ್ತಿರುವುದು ಕಂಡಿತು. ಅವರನ್ನು ಕೇಳಿದರಾಯಿತು. ಹೇಗೂ ತಾನು ಅವರ ಮನೆಯ ಲೊಕೇಶನ್‌ನಲ್ಲಿಯೇ ಇದ್ದೇನೆ ಎಂಬ ಆಶಾವಾದದಿಂದ ಇದ್ದೆ. ಸ್ಕೂಟರ್ ನನ್ನನ್ನು ದಾಟಿ ಬರ್‍ರನೆ ಸಾಗಬಹುದೆಂದು ಕೈ ತೋರಿಸಿ ನಿಲ್ಲಿಸಿದೆ. ಸ್ಕೂಟರ್ ನಿಂತಿತು. ವ್ಯಕ್ತಿಯನ್ನು ಕೇಳಿದೆ. ಹೆಲ್ಮೆಟ್ ಧರಿಸಿದ್ದ ಆತ ಹೆಲ್ಮೆಟ್‌ನ ಗಾಜನ್ನು ಹಿಂದಕ್ಕೆ ಏರಿಸಿ ದಪ್ಪ ಕನ್ನಡಕಗಳ ಹಿಂದಿನಿಂದ ನನ್ನನ್ನು ನೋಡಿ ಮುಂದಕ್ಕೆ ಹೋದ. ಆಗ ತತ್‌ಕ್ಷಣವೇ ನನಗೆ ಹೊಳೆಯಿತು. ಈತನೇ ಹಂಸಿನಿಯ ಗಂಡನೇನೋ? ನನ್ನ ಗುರುತು ಹಿಡಿದು ಆತ ಏನೂ ಉತ್ತರಿಸದೆ ಮುಂದೆ ಹೋಗಿರಬೇಕೆಂದುಕೊಂಡೆ.

ಅವನ ಸ್ಕೂಟರ್ ಹೋದತ್ತಲೇ ಹೆಜ್ಜೆ ಹಾಕಿದೆ. ಅವನು ಎಲ್ಲಿ ಮಾಯವಾದನೋ? ಹೇಗಾದರೂ ಮಾಡಿ ಅವರ ಮನೆಯನ್ನು ಹುಡುಕಲೇಬೇಕೆನ್ನುವ ಹಠದಿಂದ ಯೋಚಿಸುತ್ತಲೇ ಮುಂದೆ ನಡೆದೆ. ಇಲ್ಲ, ಮನೆ ಸಿಗುವ ಸಾಧ್ಯತೆ ಕಡಿಮೆಯೇ? ಗುರುತು ಪರಿಚಯ ಇಲ್ಲದ ಊರಿನಲ್ಲಿ ಭಿಕ್ಷುವಿನಂತೆ ಅಲೆಯುವುದು ಸುಮ್ಮನೆ ಎನಿಸಿ, ಇನ್ನು ಕೊನೆಗೆ ಸಿನಿಮಾ, ಕಥೆ, ಕಾದಂಬರಿಗಳಲ್ಲಿ ಬರುವಂತೆ ರಸ್ತೆಯ ಪಕ್ಕದಲ್ಲಿರುವ ಗೂಡಂಗಡಿಯೋ ಇನ್ನೊಂದನ್ನೋ ಹುಡುಕಿ ಅಲ್ಲಿ ವಿಳಾಸವನ್ನು ಕೊಟ್ಟು ವಿಚಾರಿಸುವುದೇ ಒಳ್ಳೆಯದು ಎನಿಸಿ ಮಾರು ದೂರವಿದ್ದ ಅಂಗಡಿಯ ಬಳಿ ನಡೆದೆ. ಗಿರಾಕಿಗಳಿಲ್ಲದ ಸಮಯ ನನಗೆ ಅನುಕೂಲವಾಗಿತ್ತು. ವಿಳಾಸವನ್ನು ಕೇಳಿದೆ.

'ಓ! ತೋಶಿಬಾಯಿ ಕಾಂಪೌಂಡಾ? ಅವರು ಸಿಗುವುದು ಡೌಟ್' ಎಂದು ಅತ್ತಿತ್ತ ನೋಡಿ ಬಹಳ ಕುತೂಹಲದಿಂದ ಬಗ್ಗಿ, 'ಪಬ್ಲಿಕ್‌ನಲ್ಲಿ ಅವನ ಬಗ್ಗೆ ವಿಚಾರಿಸಬೇಡಿ. ಜನ ನಿಮ್ಮನ್ನು ತಪ್ಪು ತಿಳ್ಕೊಂಡಾರು' ಎಂದು ಗುಟ್ಟಾಗಿ ಹೇಳಿ, 'ನೀವು?' ಎಂದ ನನ್ನನ್ನು ಕುತೂಹಲಕ್ಕೆ ತಳ್ಳಿ. ನನ್ನೆದೆ ಡವಡವ ಅನ್ನುವುದಕ್ಕೆ ಶುರುವಿಟ್ಟಿತು. ಹಂಸಿನಿ ಸುಮ್ಮನೆ ಮನೆಗೆ ಬಂದಿಲ್ಲ. ಇಲ್ಲೇನೋ ನಡೆದಿದೆ. ನನ್ನ ಮನದಲ್ಲಿಯ ತಳಮಳಕ್ಕೆ ನಾನು ಅವನು ಕೇಳಿದ ಪ್ರಶ್ನೆಗೆ ಉತ್ತರಿಸದೆ ಅಲ್ಲಿಂದ ಹೊರಟೆ. ಅವನು ನನ್ನನ್ನು ವಿಚಿತ್ರವಾಗಿ ನೋಡುತ್ತಿರಬಹುದು.

ನಾನು ಊರಿಗೆ ಬರುವಷ್ಟರಲ್ಲಿ ಪುಣೆಗೆ ಹೋದ ವಿಷಯ ಹಂಸಿನಿಗೆ ತಿಳಿಯಿತೋ ಅಥವಾ ಯಾರಾದರೂ ಅವಳಿಗೆ ತಿಳಿಸಿದರೋ ನನಗೆ ಗೊತ್ತಿಲ್ಲ. ಹಂಸಿನಿ ಒಂದೇ ಸಮನೆ ತಾನು ಅನಾಥಾಶ್ರಮಕ್ಕೆ ಹೋಗುತ್ತೇನೆಂದು ಹಟ ಹಿಡಿದಿದ್ದಳಂತೆ. ಕೊನೆಗೆ ಅಪ್ಪ ಅಮ್ಮ ಇಬ್ಬರೂ ಸೇರಿ ಅವಳನ್ನು ಸಮಾಧಾನಿಸುವಷ್ಟರಲ್ಲಿ ಸಾಕುಬೇಕಾಯಿತಂತೆ. ಹಂಸಿನಿಗೆ ತಾನು ಪುಣೆಗೆ ಹೋದ ವಿಚಾರ ತಿಳಿಯಿತೆ? ತಿಳಿದದ್ದೇ ಆದರೆ ನನಗೆ ಅನುಕೂಲವೇ ಆಯಿತು. ಅವಳನ್ನು ವಿಚಾರಿಸಿದರೆ ಎಲ್ಲವನ್ನೂ ತಿಳಿದುಕೊಳ್ಳಬಹುದಿತ್ತು ಎಂದುಕೊಂಡೆನಾದರೂ ಅದು ಹಾಗಾಗಿರಲಿಲ್ಲ. ಯಾರೋ ಪಕ್ಕದ ಮನೆಯವರು, ಹಂಸಿನಿಯ ಕ್ಲಾಸ್‌ಮೇಟ್ ಒಬ್ಬಳ ಅಮ್ಮ ಬಂದು, 'ಹೌದೇ, ಹಂಸಿನಿ ಗಂಡನನ್ನು ಬಿಟ್ಟು ಬಂದಿದ್ದಾಳಂತೆ ನನ್ನ ಮಗಳಿಗೆ ಯಾರೋ ಹೇಳಿದರಂತೆ' ಎಂದು ಅಂದಾಜಿಗೆ ಕಲ್ಲು ಎಸೆದದ್ದೋ ಇಲ್ಲ, ಮಗಳಿಗೆ ಗೊತ್ತಾಗಿಯೇ ಹೇಳಿದರೋ ಗೊತ್ತಿಲ್ಲ. ಅಂತು ಅಮ್ಮನನ್ನೇ ನೇರವಾಗಿ ಕೇಳಿದರಂತೆ. ಅಮ್ಮ ಇಂತಹ ಸೂಕ್ಷ್ಮ ವಿಚಾರಗಳನ್ನು ಬಹಳ ನಾಜೂಕಿನಿಂದ ಇತ್ಯರ್ಥ ಮಾಡುವವಳು. ಆಕೆಯನ್ನು ಕರೆದುಕೊಂಡು ಹಿತ್ತಲಿಗೆ ಹೋದರಂತೆ.

'ನೋಡಿ, ಇನ್ನೂ ವಿಷಯ ಏನೂಂತ ನನಗೂ ನಮ್ಮ ಮನೆಯವರಿಗೂ ಗೊತ್ತಿಲ್ಲ. ನಿಮಗೆ ಯಾರು ಹೇಳಿದರು? ಸುಮ್ನೆ ಏನೇನೋ ಊಹಿಸಿಕೊಂಡು ಸುಳ್ಳು ಸುದ್ದಿಯನ್ನು ಹರಡಬೇಡಿ. ನಿಮ್ಮ ಮಗಳಿಗೆ ಯಾರು ಹೇಳಿದ್ದಂತೆ. ಗೊತ್ತಿದ್ರೆ ತಿಳಿಸಿ. ನಮಗೆ ಗೊತ್ತಿಲ್ಲದ್ದು ಊರಿನವರಿಗೆ ಹೇಗೆ ಗೊತ್ತಾಯ್ತು?' ಅಮ್ಮ ಅವರನ್ನು ಜಾಲಾಡಿಸಿದರೆ ಆ ಹೆಂಗಸು ತನಗೇನೂ ಗೊತ್ತಿಲ್ಲವೆಂದು ಅಮ್ಮನ ಹತ್ತಿರ ಕ್ಷಮೆಯಾಚಿಸಿ ಹೋದರಂತೆ. ಗೊತ್ತಿಲ್ಲದ ವಿಷಯವನ್ನು ತಮ್ಮದೇ ದೃಷ್ಟಿಯಲ್ಲಿ ಅಳೆದು ಸುರಿದು ಏನೇನೋ ಕಥೆ ಕಟ್ಟುವವರಿಗೆ ಕೊರತೆಯೇ?

ಯಾವತ್ತೂ ಮನೆಯಿಂದ ಹೊರಗೆ ಹೋಗದ ಹಂಸಿನಿ ಶೀತ ಜ್ವರವೆಂದು ನಾಲ್ಕು ದಿನ ಮಲಗಿದಾಗ ಅಮ್ಮನೇ ಅವಳನ್ನು ಕರೆದುಕೊಂಡು ಡಾಕ್ಟರ್ ಹತ್ತಿರ ಹೋದಳಂತೆ. ಅಲ್ಲಿ ಯಾರೋ ಹಂಸಿನಿಯ ಗೆಳತಿ ಭೇಟಿಯಾಗಿ ಮಾತಾಡಿದಳಂತೆ. ಆಮೇಲೆ ಜ್ವರ ತಾಪದಂತೆ ಅವಳ ಅನುಮಾನಗಳೂ ಜಾಸ್ತಿಯಾಗುತ್ತಾ ಮನೆ ಬಿಟ್ಟುಹೋಗುವ ನಿರ್ಧಾರಕ್ಕೆ ಬಂದಳೇನೋ ಎಂದು ಅಮ್ಮ ನನಗೆ ಹೇಳಿದಾಗ ನನಗೆ ತಡೆಯಾಗಲಿಲ್ಲ.

'ನಿನ್ನ ಪಾಲಿಗೆ ನಾವೇನು ಸತ್ತು ಹೋಗಿದ್ದೀವಾ, ನೀನು ಅನಾಥಾಲಯಕ್ಕೆ ಸೇರೋದಿಕ್ಕೆ? ನಿನ್ನ ಗಂಡನ ಮನೆಯಲ್ಲಿ ಏನು ಆಗಿದೆ ಅನ್ನೋದನ್ನು ಹೇಳಿದ್ರೆ ನಾವೇನಾದ್ರೂ ಒಂದು ನಿರ್ಧಾರಕ್ಕೆ ಬರಬಹುದಲ್ವಾ?' ಎಂದು ಅವಳನ್ನು ಕನ್ವಿನ್ಸ್ ಮಾಡುವುದಕ್ಕೆ ಪ್ರಯತ್ನಿಸಿದೆನಾದರೂ, ಅವಳು ಏನೂ ಹೇಳದೆ ಮೂಕಿಯಂತೆ ಸುಮ್ಮನಾದಳು. ಅಮ್ಮ ನಾನೇನಾದರೂ ಅವಳ ಬಾಯಿ ಬಿಡಿಸುವ ಉದ್ದೇಶದಿಂದ ತಾಳ್ಮೆ ಕಳೆದುಕೊಂಡು ಸಿಟ್ಟಿನಿಂದ ಮಾತಾಡಬಹುದೆಂದು ನನ್ನನ್ನು ಕಣ್ಸನ್ನೆಯಲ್ಲಿಯೇ ಸುಮ್ಮನಿರುವಂತೆ ಹೇಳಿದಳು.

ಅಮ್ಮ ರಾತ್ರಿ ಮುಸುರೆ ಕೆಲಸಗಳನ್ನೆಲ್ಲಾ ಮುಗಿಸಿ ಹೊರಗೆ ಬಂದಾಗ, 'ಅವಳ ಹತ್ರ ಆಲ್ಬಂ ಏನಾದರೂ ಇದೆಯಾ?' ಎಂದು ಕೇಳಿದೆ. ಅಮ್ಮ ದೀರ್ಘವಾದ ನಿಟ್ಟಿಸಿರು ಬಿಟ್ಟು, 'ಆಲ್ಬಂ ಬಿಡು. ಉಟ್ಟ ಬಟ್ಟೆಯಲ್ಲಿಯೇ ಹಾಗೆ ಬಂದವರಂತೆ ಎಲ್ಲವನ್ನೂ ಬಿಟ್ಟು ಬಂದಿದ್ದಾಳೆ. ನಾವು ಹಾಕಿದ ಚಿನ್ನ ಸೈತ ತರಲಿಲ್ಲ' ಎಂದರು.

ಹಾಗಾದರೆ ಅವಳಿಗೆ ಮತ್ತೆ ಅಲ್ಲಿಗೆ ಹೋಗುವ ಉದ್ದೇಶವಿತ್ತೇ? ನಾವೇ ಅವಳನ್ನು ಕರೆದುಕೊಂಡು ಬಿಟ್ಟು ಬರಬಹುದಿತ್ತು ಎನ್ನುವ ಕೀಳರಿಮೆ ನನಗಾಯಿತು. ಕಾಲ ಮಿಂಚಿ ಹೋಯಿತಲ್ಲಾ ಎಂದು ವ್ಯಥೆಪಟ್ಟೆ. ಅಮ್ಮನನ್ನು ಕೇಳಿದರೆ, 'ಸುಮ್ಮನಿರು, ಅವಳಾಗಿಯೇ ಹೇಳಿಯಾಳು' ಎಂದರು.

ನಾನು ಸುಮ್ಮನಾದೆ. ಆದರೆ ಮುಗಿಲು ಸುಮ್ಮನಿರುವುದೇ? ಎಲ್ಲೆಂದರಲ್ಲಿ ಮಳೆಯನ್ನು ಸುರಿದೇ ಬಿಡುವಂತೆ ತೇಲಿ ಸಾಗುತ್ತಿತ್ತು. ಮಳೆಯಿಲ್ಲ, ಬರೀ ಮುಗಿಲುಗಳು ಆವರಿಸಿಕೊಂಡ ಬಾನು. ನಾನು ಇಲ್ಲದ ದಿವಸ ಮೋಡದಂತೆ ಅವಳ ಗಂಡನೆನ್ನುವವನು ಊರಿಗೆ ಬಂದನಂತೆ. ಅವನು ಬಂದದ್ದು ನೋಡಿ ಹಂಸಿನಿ ಕೋಣೆಯ ಬಾಗಿಲು ಹಾಕಿಕೊಂಡು ಕುಳಿತಳಂತೆ. ಅವಳು ಊರಿಗೆ ಬಂದು ಎರಡು ವರ್ಷಗಳ ಬಳಿಕ ಅವನು ಬಂದಿರುವುದು. ಅಮ್ಮ ಯಾವ ಧೈರ್ಯದಲ್ಲಿ ಮಗಳನ್ನು ಕಳುಹಿಸಿಯಾರು? ಅಮ್ಮನಿಗೆ ಧರ್ಮಸಂಕಟಕ್ಕಿಟ್ಟುಕೊಂಡಿತು. ಹಂಸಿನಿ ಬಾಗಿಲು ಹಾಕಿಕೊಂಡು ಕುಳಿತದ್ದೇ ಒಳ್ಳೆಯದಾಯಿತೆಂದುಕೊಂಡು ಆಕೆಯನ್ನು ಕರೆಯಲಿಲ್ಲ. ಮನೆ ಬಾಗಿಲಿಗೆ ಬಂದವನನ್ನು ಅವಮಾನ ಮಾಡುವುದೇ? ಅಮ್ಮ ಆಸರಿಗೆಗೆ ಏನಾದರೂ ನೀಡಲೆಂದು ಒಳಗೆ ಹೋದರಂತೆ. ಬಂದವರು ಅಪ್ಪನ ಬಳಿ ಏನೋ ಗೊಣಗಿದರಂತೆ. ಅಮ್ಮ ಆಸರಿಗೆಯನ್ನು ಹೊತ್ತು ಹೊರಗೆ ಬಂದವಳೇ, 'ಇಷ್ಟು ದಿನ ನೀವು ವಿಚಾರಿಸದವರು ಈಗ ಬಂದು ಕರೆದುಕೊಂಡು ಹೋಗಲು ಬಂದಿದ್ದೇನೆಂದರೆ ಯಾವ ಧೈರ್ಯದಲ್ಲಿ ನಿಮ್ಮ ಜೊತೆಗೆ ಕಳಿಸುವುದು?' ಎಂದಳಂತೆ. ಅವರು, 'ನೀವೇ ಅವಳನ್ನು ಕರೆಸಿಕೊಂಡವರು. ನೀವೇ ಕಳುಹಿಸಿಕೊಡಬೇಕಿತ್ತು' ಎನ್ನುವ ಉಡಾಫೆಯ ಮಾತುಗಳನ್ನು ಹೇಳಿದರಂತೆ. ಅಮ್ಮನಿಗೆ ತಿಳಿಯದ್ದೇನಿದೆ? ಮುಳ್ಳಿನ ಮೇಲೆ ಬಿದ್ದ ಬಟ್ಟೆಯನ್ನು ಜಾಗ್ರತೆಯಿಂದ ತೆಗೆಯುವ ಹಾಗೆ, 'ನೀವು ಇಷ್ಟು ದಿವಸ ಬರದಿದ್ದವರು. ಇದ್ದಕ್ಕಿದ್ದಂತೆ ಬಂದು ಕರೆದುಕೊಂಡು ಹೋಗುತ್ತೇನೆಂದರೆ ನಾವೂ ಸ್ವಲ್ಪ ಆಲೋಚಿಸಬೇಕಾಗ್ತದೆ. ನಿಮ್ಮ ಅಪ್ಪ ಅಮ್ಮನೂ ಬರಲಿ, ಏನು ಕಥೆ ಎಂತದ್ದೂಂತ ವಿಚಾರಿಸಿಯೇ ಕಳುಹಿಸುತ್ತೇವೆ' ಎಂದಳಂತೆ.

'ಖುಷಿ ಬಂದ ಹಾಗೆ ಎದ್ದು ಬರುವುದಕ್ಕೆ